3. ಶ್ರೀ ಎ.ಟಿ. ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ/ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಕುರಿತು ಜಂಟಿ ಸದನ ಸಮಿತಿಯ ಮಧ್ಯಂತರ (ಭಾಗ–1) ವರದಿಯನ್ನು ಒಪ್ಪಿಸುತ್ತೇನೆ.

4. ಶ್ರೀ ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಮಿತಿಯ ಅಧ್ಯಕ್ಷರ ಪರವಾಗಿ 2005–06ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 24ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಈಗ ಸಭೆಯನ್ನು ಊಟಕ್ಕೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ1.30 ಗಂಟೆಗೆ ಮುಕ್ತಾಯಗೊಂಡು ಮಧ್ಯಾಹ್ನ 2.30 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನ: ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು, ಶಾಸಕರು ಹಾಗೂ ಅಧಿಕಾರಿಗಳು ಸದನದಲ್ಲಿ ಹಾಜರಿಲ್ಲದಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು 2 ಗಂಟೆ 30 ನಿಮಿಷಕ್ಕೆ ಸಭೆ ಕರೆದಿದ್ದೀರಿ. ಸದನ ಸೇರುತ್ತಿರುವ ಮೊದಲನೆ ದಿವಸದಲ್ಲೇ ಮಂತ್ರಿಗಳು ಯಾರೂ ಇಲ್ಲ, ಅಧಿಕಾರಿಗಳೂ ಇಲ್ಲ, ಶಾಸಕರೂ ಇಲ್ಲ. ಏನಿದು ಪರಿಸ್ಥಿತಿ? ಏನು ದುರಂತ ಇಂತಹ ಪರಿಸ್ಥಿತಿ ಸದನಕ್ಕೆ ಎಂದಿಗೂ ಬರಬಾರದು. ಈ ಸದನದ ಗೌರವ, ಗಾಂಭೀರ್ಯ ನಾಶವಾಗಿದೆ. ನಿಮ್ಮ ಶಾಸಕರು ಎಲ್ಲಿ ಹೋಗಿದ್ದಾರೆ? ಅಧಿಕಾರಿಗಳು ಎಲ್ಲಿ ಹೋದರು? ಶಾಸಕರು ಎಲ್ಲಿ ಹೋದರು? ಸತ್ತುಹೋದ ನಿಗಮ, ಮಂಡಳಿಗಳಿಗೆ ಅವರೆಲ್ಲರೂ ಕಾಯ್ದುಕೊಂಡು ಕುಳಿತಿರಬೇಕು. ನಿಮಗೆ ನಾನು ಇದರ ಬಗ್ಗೆ ಎಷ್ಟು ಸಾರಿ ಹೇಳಬೇಕು? ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಸದನ ಪ್ರಾರಂಭವಾಗುತ್ತಿರುವ ಮೊದಲನೇ ದಿವಸವೇ. ಹೀಗೆ ಆದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಹೊಸ ವರ್ಷದಲ್ಲಿ ಸದನ ಪ್ರಾರಂಭವಾಗಿರುವ ಮೊದಲನೇ ದಿವಸ ಇದಾಗಿದೆ. ಇವೊತ್ತಿನ ದಿವಸವೇ ಇಂತಹ ಪ್ರೇತಕಳೆ! ಇಂತಹ ಪರಿಸ್ಥಿತಿ ಬರಬಾರದು.